INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,91-99
Peer Reviewed Journal, Referred Journal

# ಮಸ್ಕಿ ತಾಲೂಕಿನ ಗ್ರಾಮಗಳ ರಕ್ಷಣಾ ವಾಸ್ತು ಒಂದು ವಿಶ್ಲೇಷಣಾ ವಿಮರ್ಶೆ

ನಾಗರಾಜ .[1]
ಡಾ.ಕೆ.ಎನ್. ಮೋಹನ್.[2]

"ದುರ್ಗಹಿನೋ ಪ್ರಜಾಪತಿಃ ವಾತಾಭ್ರಮಿವ...." ದುರ್ಗಗಳಿಲ್ಲದ ರಾಜನು ಬಿರುಗಾಳಿಗೆ ಸಿಲುಕಿದ ಮೋಡವಾಗಿ ಚದುರಿಸಲ್ಪಡುತ್ತಾನೆ. ಎಂಬ ಅಭಿಲಷಿತಾರ್ಥ ಚಿಂತಾಮಣಿ ಗ್ರಂಥವು ರಾಜನ ವಾಸ್ತವ್ಯಕ್ಕೆ ದುರ್ಗದ ಮಾಹಿತಿಯನ್ನು ಹೇಳುತ್ತದೆ. ರಕ್ಷಣಾ ವ್ಯವಸ್ಥೆಯು ಈ ಪ್ರಾಚೀನ ಸೂತ್ರಕ್ಕೆ ಅನುಗುಣವಾಗಿ ಕರ್ನಾಟಕದ ರಾಜರು ಕೂಡ ಇನ್ನುಳಿದಂತೆ ರಾಜ್ಯ ಕಟ್ಟುವ ಹವ್ಯಾಸದಲ್ಲಿ ಘೋರಯುದ್ಧಗಳನ್ನೆಸಗಿ ಜಯಿಸಿದ ನಾಡ ನೆಲದ ರಕ್ಷಣೆಗಾಗಿ ಹಾಗೂ ಅಲ್ಲಿಯ ಜನರ ರಕ್ಷಣೆಗಾಗಿ ಮತ್ತು ಸ್ವರಕ್ಷಣೆಗಾಗಿ ಅಲ್ಲಲ್ಲಿ ಕೋಟೆ–ಕೊತ್ತಲಗಳನ್ನು ಕಟ್ಟಿದರು. ಆ ರಕ್ಷಣಾ ಗೋಡೆಗಳು ನೆಲದ ಹಾಗೂ ಜನರ ರಕ್ಷಣೆ ಮಾಡಿದ್ದಲ್ಲದೇ ಮನವ ಜೀವನದ ಗುಣಮೌಲ್ಯಗಳನ್ನು ತನ್ನ ರಕ್ಷಣಾ ರೆಕ್ಕೆಗಳಲ್ಲಿ ತುಂಬಿಕೊಂಡವು ಹಾಗೂ ಅವುಗಳನ್ನು ಉಳಿಸಿ ಬೆಳೆಸಿಕೊಂಡು ಬಂದವು.

ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ಬಹುಮುಖ್ಯವಾಗಿ ವಿಜಯನಗರ ಮತ್ತು ಬಹುಮನಿ ಸುಲ್ತಾನ ರಾಜ್ಯಗಳ ನಡುವೆ ಎಡದೊರೆನಾಡು ಪ್ರದೇಶವೆಂದು ಗುರುತಿಸಲ್ಪಡುವ ತುಂಗಾಭದ್ರ ಮತ್ತು ಕೃಷ್ಣ ನದಿಗಳ ನಡುವಿನ ಪ್ರದೇಶಕ್ಕಾಗಿ ಮತ್ತು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಮೇಲಿಂದ ಮೇಲೆ ನಡೆಯುತ್ತಿದ್ದ ಯುದ್ಧಗಳು ಆ ರಾಜ್ಯಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತಿದ್ದವು. ಈ ಅವಧಿಯಲ್ಲಿ ಕೋಟೆಗಳನ್ನು ನಿರ್ಮಿಸುವುದು ಒಂದು ಸಂಪ್ರದಾಯ ಹಾಗೂ ಅನಿವಾರ್ಯವೂ ಆಗಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯಗಳ ಗಡಿ ಭಾಗದ ಗ್ರಾಮಗಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದ್ದರಿಂದ ಅಂತಹ ಗ್ರಾಮಗಳ ರಕ್ಷಣೆಗಾಗಿ ಕೋಟೆ ಮತ್ತು ಹುಡೇವುಗಳ ರಚನೆ ಆರಂಭವಾಯಿತು ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಎಡದೊರೆ ಪ್ರದೇಶದ

---

1. ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

2 . ಮುಖ್ಯಸ್ಥರು, ಮುಖ್ಯಸ್ಥರು, ಸ್ನಾತಕ ಮತ್ತು ಸ್ನಾತಕೋತ್ತರ, ವಿಭಾಗ ಇತಿಹಾಸ ವಿಭಾಗ, ಶ್ರೀ.ಡಿ.ದೇವರಾಜ ಅರಸು ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು

ಭಾಗವಾಗಿರುವ ಮಸ್ಕಿ ತಾಲೂಕಿನ ಗ್ರಾಮಗಳಲ್ಲಿಯು ಸಹ ರಕ್ಷಣಾ ದೃಷ್ಟಿಯಿಂದ ಈ ರೀತಿಯ ವಾಸ್ತುಗಳು ರಚನೆಯಾಗಿರುವ ಸಾಧ್ಯತೆಗಳು ಅಧಿಕವಾಗಿವೆ.

ಈ ಮಧ್ಯಕಾಲೀನ ಅವಧಿಯಲ್ಲಿ ಬದಲಾದ ಯುದ್ದ, ಯುದ್ಧ–ಕಲೆ ಹಾಗೂ ಮದ್ದುಗುಂಡುಗಳ ಬಳಕೆಯಿಂದ ಉಂಟಾಗುತ್ತಿದ್ದಂತಹ ಪರಿಣಾಮಗಳಿಗೆ ಪ್ರತಿರೋಧವಾಗಿ ಸಾಂಪ್ರದಾಯಿಕ ಮಣ್ಣಿನ ಹಾಗೂ ಸಾಧಾರಣ ಎತ್ತರದ ಕೋಟೆಗಳ ಬದಲಾಗಿ ದೊಡ್ಡ ಗಾತ್ರದ ಕಲ್ಲಿನಿಂದ ನಿರ್ಮಿತವಾದ ಸುಸಜ್ಜಿತವಾದ ಕೋಟೆ ಮತ್ತು ಹುಡೇವುಗಳು ತಲೆಯೆತ್ತಿದ್ದವು ಎಂದು ತರ್ಕಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನ ಮಸ್ಕಿ ತಾಲೂಕಿನ ಮಧ್ಯಕಾಲೀನ ಗ್ರಾಮಗಳಲ್ಲಿನ ನಾಗರಿಕರಿಗೆ ತಾತಾಲ್ಕಿಕ ರಕ್ಷಣೆ ಒದಗಿಸುತ್ತಿದ್ದ ರಕ್ಷಣಾ ಕಟ್ಟಡಗಳ ಕುರಿತಾಗಿದೆ.

ಈ ತಾಲೂಕಿನ ಗ್ರಾಮಗಳಲ್ಲಿ ಕೋಟೆಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡುಬಂದರು ಸಹ ಅದರ ಭಾಗವಾಗಿದ್ದ ಹುಡೇವುಗಳು ಸುಮಾರು 40ಕ್ಕೂ ಅಧಿಕ ಗ್ರಾಮಗಳಲ್ಲಿ ಕಂಡುಬಂದಿವೆ. ಅವುಗಳಲ್ಲಿನ ಪ್ರಮುಖವಾದ ಗ್ರಾಮಗಳ ರಕ್ಷಣಾ ವಾಸ್ತುವಿನ ಬಗೆಗೆ ಮಾತ್ರ ಪ್ರಸ್ತುತ ಲೇಖನದಲ್ಲಿ ಮಾಹಿತಿಯನ್ನು ನೀಡಲಾಗಿದೆ. ಈ ರಕ್ಷಣಾ ವಾಸ್ತುಗಳು ವಾಸ್ತು, ವಿನ್ಯಾಸ ಮತ್ತು ಬಳಸಿಕೊಂಡ ಪರಿಕರಗಳಲ್ಲಿ ಒಂದಕ್ಕೊಂದು ಸಾಮ್ಯತೆಗಳಿವೆ.

**ಮೇದಕಿನಾಳ**: ಮಸ್ಕಿಯಿಂದ ಮುದಗಲ್ ಪಟ್ಟಣಕ್ಕೆ ಸಂಪರ್ಕಿಸುವ ರಾಜ್ಯ ಹೆದ್ದಾರಿಯಲ್ಲಿ ಕಂಡುಬರುವ ಈ ಐತಿಹಾಸಿಕ ಗ್ರಾಮವು ಮಸ್ಕಿಯಿಂದ ಪಶ್ಚಿಮಕ್ಕೆ 10 ಕೀ.ಮೀ ದೂರದಲ್ಲಿದೆ. ಇದು 17–18 ನೇ ಶತಮಾನದಲ್ಲಿ ಮೆದಕಿನಾಳ ನಾಡಗೌಡರ ಆಳ್ವಿಕೆಯ ಕೇಂದ್ರಸ್ಥಾನವಾಗಿತ್ತು. ಇವರ ಕಾಲವಾಧಿಯಲ್ಲಿ ಪ್ರಾಚೀನ ಗ್ರಾಮದ ಸುತ್ತಲೂ ನಿರ್ಮಾಣಗೊಂಡಿರುವ ಕೋಟೆಯನ್ನು ಇಂದಿಗೂ ಕಾಣಬಹುದಾಗಿದ್ದು ಇದು 2 ಮೀ ರಿಂದ 3.ಮೀ.ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ. ಇದರ ಕುಂಬಿಯು ಕೋಡೆಯ 'ನಿಟು'ಗಳಂತೆ ಮಾಡಲಾಗಿದ್ದು, ಅಲ್ಲಲ್ಲಿ ವಿಕ್ಷಣಾಗೋಪುರಗಳಿದ್ದು ವೈರಿಗಳ ಚಲನವಲನಗಳು ತಿಳಿಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು ಎಂದು ತಿಳಿಯಬಹುದಾಗಿದೆ. ಪ್ರಸ್ತುತ ಈ ಕೋಟೆಯು ತನ್ನ ಮೂಲ ಅಸ್ತತ್ವವನ್ನು ಉಳಿಸಿಕೊಂಡಿಲ್ಲದಿದ್ದರು ಸಹ ಅದರ ಪ್ರಾಚೀನ ಕುರುಹುಗಳು ಅದರ ಬೃಹತ್ ಗಾತ್ರದ ನಿರ್ಮಾಣ ಮತ್ತು ಅದರ ಅಸ್ತಿತ್ವವನ್ನು ಸಾಕ್ಷೀಕರಿಸುತ್ತದೆ.

**ಕೋಟೆಕಲ್**: ಕೋಟೆಯಿಂದಲೇ ತನ್ನ ಗ್ರಾಮನಾಮದಿಂದ ಗುರುತಿಸಿಕೊಳ್ಳುವ ಈ ಗ್ರಾಮವು ಮಸ್ಕಿ ತಾಲೂಕಿನ ಪಾಮನಕೆಲ್ಲೂರು ಹೋಬಳಿಯಲ್ಲಿ ಕಂಡುಬರುತ್ತದೆ. ಈ ಗ್ರಾಮದ ಬೆಟ್ಟದ ಮೇಲೆ ಸುತ್ತಲು ಕೋಟೆ ಕಾಣಬಹುದಾಗಿದ್ದು, ಇದು 2 ರಿಂದ 3 ಅಡಿ ದಪ್ಪದ ಗೋಡೆಯನ್ನು ಹೊಂದಿದ್ದು, ಕೆಲವು ಕಡೆ ನೆಲಮಟ್ಟದವರೆಗೆ ಕೋಟೆ ಗೋಡೆ ಇದ್ದರೆ ಕೆಲವೊಂದು ಕಡೆ 5 ರಿಂದ 8 ಅಡಿ ಎತ್ತರವಿದೆ. ಇದಕ್ಕಾಗಿ ಸ್ಥಳಿಯವಾಗಿ ದೊರಕುವ ಅನಿಯಮಿತಾಕಾರದ ಶಿಲೆಗಳನ್ನು ಬಳಸಿಕೊಂಡಿರುವುದನ್ನು

ಕಾಣಬಹುದಾಗಿದೆ. ಇಲ್ಲಿ ಮುಖ್ಯವಾಗಿ 4 ವಿಕ್ಷಣಾ ಗೋಪುರಗಳನ್ನು(ವಾಡೆ) ಕಾಣಬಹುದಾಗಿದ್ದು, ಅವುಗಳು 8 ರಿಂದ 10 ಅಡಿ ಎತ್ತರ ಎತ್ತರವನ್ನು ಹೊಂದಿವೆ. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ.

**ನಾಗರಬೆಂಚಿ:** ತಾಲೂಕು ಕೇಂದ್ರ ಮಸ್ಕಿಯಿಂದ ದಕ್ಷಿಣಕ್ಕೆ 10 ಕಿ.ಮೀ ದೂರದಲ್ಲಿರುವ ಈ ಗ್ರಾಮವು 17-18 ನೇ ಶತಮಾನದಲ್ಲಿ ಮೆದಕಿನಾಳ ನಾಡಗೌಡರ ಆಳ್ವಿಕೆಗೆ ಒಳಪಟ್ಟಂತಹ ಗ್ರಾಮವಾಗಿದ್ದು, ಅದರ ಪ್ರತಿರೂಪಕವಾಗಿ ಇಲ್ಲಿ ಹುಡೇವು ಕಾಣಬಹುದಾಗಿದೆ. ಈ ಸ್ಮಾರಕವು ಸುಮಾರು 20 ಮೀ ಎತ್ತರ ಹಾಗೂ 8 ಮೀ ವ್ಯಾಸವನ್ನು ಹೊಂದಿದೆ. ಸ್ಥಳಿಯವಾಗಿ ದೊರೆಯುವ ಮಧ್ಯಮ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದ್ದು ಹುಡೆಗೋಡೆಯು 1.5 ರಿಂದ 2 ಮೀ.ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ. ಗ್ರಾಮದ ಅಭಿಮುಖ ದಿಕ್ಕಿನ ಗೋಡೆಯಲ್ಲಿ ಚಿಕ್ಕ ದ್ವಾರಕಿಂಡಿಯನ್ನು ಕಾಣಬಹುದಾಗಿದೆ. ಈ ಸ್ಮಾರಕವು ನಶಿಸುವ ಹಂತಕ್ಕೆ ತಲುಪಿರುವುದು ವಿರ್ಪಯಾಸ.

**ಬೈಲಗುಡ್ಡ:** ತಾಲೂಕು ಕೆಂದ್ರ ಮಸ್ಕಿಯಿಂದ ಪಶ್ಚಿಮಕ್ಕೆ 13 ಕಿ.ಮೀ ದೂರದಲ್ಲಿರುವ ಈ ಐತಿಹಾಸಿಕ ಗ್ರಾಮವು ಸಹ ಮೆದಕಿನಾಳ ನಾಡಗೌಡರ ಆಳ್ವಿಕೆಗೆ ಒಳಪಟ್ಟಂತಹ ಗ್ರಾಮವಾಗಿದ್ದು, ಇವರ ಕಾಲಾವಧಿಯಲ್ಲಿ ಅಂದರೇ 16-17 ನೇ ಶತಮಾನದಲ್ಲಿ ನಿರ್ಮಾಣವಾದಂತಹ ಹುಡೇವು ಕಾಣಬಹುದಾಗಿದೆ. ಈ ಸ್ಮಾರಕವು ಬೆಟ್ಟದ ಮೇಲ್ಭಾಗದಲ್ಲಿದ್ದು ಇದು ಭಾಗಶಃ ನಶಿಸಿದ್ದು, ಊರಿನ ಅಭಿಮುಖದ ಭಾಗ ಮಾತ್ರ ಉಳಿದಿದೆ.

**ತಲೇಖಾನ:** ಮಸ್ಕಿ ತಾಲೂಕಿನ ಪ್ರಮುಖ ಐತಿಹಾಸಿಕ ಗ್ರಾಮವಾಗಿರುವ ಈ ಊರಿನ ನೈರುತ್ಯ ದಿಕ್ಕಿಗೆ ಇರುವ ಸಣ್ಣ ಬೆಟ್ಟದ ಮೇಲ್ಭಾಗದಲ್ಲಿ ವೃತ್ತಾಕಾರದ ಹುಡೇವು ಕಾಣಬಹುದಾಗಿದೆ. ಇದು ಕಾಲಮಾನ ದೃಷ್ಟಿಯಿಂದ 15-17 ನೇ ಶತಮಾನಕ್ಕೆ ಸೇರಿದ್ದಾಗಿದ್ದು, ಸರಿಸುಮಾರು 18 ರಿಂದ 20 ಮೀ ಎತ್ತರ ಹಾಗೂ 8 ರಿಂದ 10 ಮೀ. ವ್ಯಾಸದ ವಿಸ್ತೀರ್ಣಗಳಿಂದ ಕೂಡಿದ್ದು, ಗೋಡೆಯುನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದು 1.5 ರಿಂದ 2 ಮೀ. ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ. ಗ್ರಾಮದ ಅಭಿಮುಖ ದಿಕ್ಕಿನ ಗೋಡೆಯಲ್ಲಿ ಚಿಕ್ಕ ದ್ವಾರಕಿಂಡಿಯನ್ನು ಕಾಣಬಹುದಾಗಿದೆ. ಇದು ದೂರದಲ್ಲಿ ಬರುವ ವೈರಿಗಳ ಚಲನವಲನಗಳು ಗ್ರಹಿಸುವುದು ಹಾಗೂ ಗಾಳಿ ಮತ್ತು ಬೆಳಕು ನೀಡುವುದರ ಜೊತೆಗೆ ಅಕಾಲಿಕವಾಗಿ ಎರಗಿಬರುವ ವೈರಿಗಳಿಂದ ಗ್ರಾಮಸ್ಥರಿಗೆ ತಾತ್ಕಾಲಿಕ ರಕ್ಷಣೆ ಒದಗಿಸುಲು ಎಂದು ತಿಳಿಯಬಹುದಾಗಿದೆ. ಈ ಸ್ಮಾರಕದ ಹಿಂಭಾಗವು ಜಖಂಗೊಂಡಿದೆ.

**ಮೂಡಲದಿನ್ನಿ:** ಈ ಊರಿನ ಪಶ್ಚಿಮ ದಿಕ್ಕಿಗೆ ಇರುವ ಬೆಟ್ಟದಲ್ಲಿ ಕೋಟೆ ಮತ್ತು ಹುಡೇವು ಕಂಡುಬರುತ್ತವೆ. ಇದರ ಕಾಲವನ್ನು ಕ್ರಿ.ಶ. 15ನೇ ಶತಮಾನವೆಂದು ಗುರುತಿಸಬಹುದಾಗಿದೆ. ಬೆಟ್ಟದ ಸುತ್ತಲು ಕೋಟೆಯಿದ್ದು ನಾಲ್ಕು ದಿಕ್ಕುಗಳಗೂ ಒಂದರಂತೆ ವಿಕ್ಷಣಾ ಗೋಪುರಗಳಿದ್ದವು ಎಂದು ತಿಳದುಬರುತ್ತದೆ. ವಿರ್ಪಯಾಸ ಎಂದರೇ ಇಂದು ಇವೆಲ್ಲವೂ ಭಗ್ನಗೊಂಡಿದ್ದು, ಅದರ ಅವಶೇಷಗಳು ಮಾತ್ರ ಕಾಣಬಹುದಾಗಿದೆ. ಕೋಟೆಯ ನಡುಭಾಗದಲ್ಲಿ ವೃತ್ತಾಕಾರದ ಹುಡೇವು ಇದ್ದು ಹೊರಭಾಗವನ್ನು ಗಾರೆಯಿಂದ ಪ್ಲಾಸ್ಟರ್ ಮಾಡಲಾಗಿಲ್ಲ, ಗ್ರಾಮದ ಅಭಿಮುಖ ದಿಕ್ಕಿನ ಗೋಡೆಯಲ್ಲಿ ಚಿಕ್ಕ ದ್ವಾರಕಿಂಡಿಯನ್ನು ಕಾಣಬಹುದಾಗಿದೆ. ಇದರ ತಳಭಾಗದಲ್ಲಿ ಮಲ್ಲಿಕಾರ್ಜುನ್ ದೇವರಗುಡಿಯಿದೆ. ಊರಿಗೆ ಮುಖಭಾಗದ ದಿಕ್ಕಿಗೆ ಕೋಟೆಯ ಪ್ರವೇಶದ್ವಾರವಿದ್ದು ನೋಡಲು ಆಕರ್ಷಿಣಿಯವಾಗಿದೆ. ಪ್ರವೇಶ ದ್ವಾರದದಲ್ಲಿ ಕಮಾನಿನ ರಚನೆಯಿದೆ. ಗೋಡೆಯನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಂದ ನಿರ್ಮಿಸಲಾಗಿದೆ. ಕೋಟೆಗೋಡೆಯು 1.5 ರಿಂದ 2 ಮೀ.ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ. ಇದರ ನಿರ್ಮಾಣಕ್ಕಾಗಿ ಕಪ್ಪು ಮಿಶ್ರಿತ ಕಲ್ಲನ್ನು ಬಳಸಿರುವುದು ವಿಶೇಷ.

**ದಿದ್ದಿಗಿ ಕೋಟೆ:** ಈ ಗ್ರಾಮವು ತಾಲೂಕು ಕೇಂದ್ರ ಮಸ್ಕಿಯಿಂದ ಪೂರ್ವಕ್ಕೆ 20 ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ 16–17 ನೇ ಶತಮಾನದಲ್ಲಿ ಪಾಳೆಗಾರರ ಕಾಲದಲ್ಲಿ ಕಟ್ಟಲಾದ ಕೋಟೆಯಿದೆ. ಈ ಕೋಟೆಯನ್ನು ಅನಿಯಮಿತಾಕಾರದ ಕಲ್ಲುಗಳಂದ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಕೋಟೆಯ ಪೂರ್ವ ಮತ್ತು ಉತ್ತರದ ಭಾಗಗಳು ಮಾತ್ರ ಉಳದಿದ್ದು, ದಕ್ಷಿಣ ಮತ್ತು ಪಶ್ಚಿಮ ಗೋಡೆಗಳು ನಾಶವಾಗಿವೆ. ಈ ಗೋಡೆಗಳು 3 ರಿಂದ 4 ಅಡಿಗಳಷ್ಟು ಅಗಲವಾಗಿವೆ. ಕೋಟೆಯ ಪ್ರವೇಶದ್ವಾರವು ಉತ್ತರಾಭಿಮುಖವಾಗಿದ್ದು, ಇದು ಶಿಥಿಲಾವಸ್ಥೆಯಲ್ಲಿದೆ. ಪ್ರವೇಶ ದ್ವಾರದದಲ್ಲಿ ಕಮಾನಿನ ರಚನೆಯಿದೆ. ಪ್ರವೇಶದ್ವಾರ ಮುಂಭಾಗದಲ್ಲಿ ಎರಡು ವಿಶಾಲವಾದ ಕಟ್ಟೆಗಳವೆ. ಪ್ರವೇಶದ್ವಾರದ ಮಧ್ಯಭಾಗದಲ್ಲಿ ಎರಡು ಕೋಣೆಗಳ ರಚನೆಗಳವೆ. ದ್ವಾರದ ಎರಡು ಭಾಗದಲ್ಲಿ ಸರಳವಾದ ಕಮಾನಿನ ರಚನೆಯುಳ್ಳ ಕಂಬಗಳನ್ನು ನಿಲ್ಲಿಸಲಾಗಿದೆ. ಕೋಟೆಯ ಒಳಭಾಗದಲ್ಲಿ ದೇವಿ ಗುಡಿಯ ಹಿಂಭಾಗದಲ್ಲಿ ಬುರುಜಿನ ಅವಶೇಷಗಳು ಕಂಡುಬರುತ್ತವೆ. ಕೋಟೆಯ ಒಳಭಾಗದಲ್ಲಿ ಬಿದ್ದಿರುವ ಮನೆಯ ಅವಶೇಷಗಳವೆ. ಕೋಟೆಯ ಹೊರಭಾಗದಲ್ಲಿ ಪಶ್ಚಿಮಕ್ಕೆ ಅರ್ಧ ಮುಚ್ಚಿಹೋಗಿರುವ ಕಂದಕಗಳವೆ.

**ಕಲ್ಯಾಣ ಹುಡೇವು:** ಈ ಗ್ರಾಮದಲ್ಲಿ ಹೆಸರೇ ಸೂಚಿಸುವಮತೆ ಹುಡೇವು ಇದೆ. ಇದು ಇಂದು ಅರ್ಧಕ್ಕಿಂತ ಹೆಚ್ಚು ಭಾಗ ನಾಶವಾಗಿದೆ. ಕೇವಲ 10 ಅಡಿಯಷ್ಟು ಎತ್ತರ ಮಾತ್ರ ಉಳದಿರುವ ಈ ಹುಡೇವು ಅನಿಯಮಿತಾಕಾರದ ಕಲ್ಲುಗಳಂದ ಕಟ್ಟಲಾಗಿದೆ. ಸರಿಸುಮಾರು 10 ಮೀ ಎತ್ತರ ಹಾಗೂ 8

ರಿಂದ 10 ಮೀ. ವ್ಯಾಸದ ವಿಸ್ತೀರ್ಣಗಳಿಂದ ಕೂಡಿದ್ದು, ಗೋಡೆಯುನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದು 1.5 ರಿಂದ 2 ಮೀ. ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ.

**ಸಾನಬಾಳ:** ತಾಲೂಕು ಕೇಂದ್ರ ಮಸ್ಕಿಯಿಂದ 5 ಕಿ.ಮೀ ದೂರದಲ್ಲಿರುವ ಈ ಐತಿಹಾಸಿಕ ಗ್ರಾಮದಲ್ಲಿ ಕೋಟೆ ಅವಶೇಷಗಳು ಕಂಡುಬರುತ್ತವೆ. ಕೋಟೆಯ ಪೂರ್ವ ಮತ್ತು ಉತ್ತರದ ಭಾಗಗಳು ಮಾತ್ರ ಉಳಿದಿದ್ದು, ದಕ್ಷಿಣ ಮತ್ತು ಪಶ್ಚಿಮ ಗೋಡೆಗಳು ನಾಶವಾಗಿವೆ. ಈ ಗೋಡೆಗಳು 3 ರಿಂದ 4 ಅಡಿಗಳಷ್ಟು ಅಗಲವಾಗಿವೆ. ಕೋಟೆಯ ಪ್ರವೇಶದ್ವಾರವು ಉತ್ತರಾಭಿಮುಖವಾಗಿದ್ದು, ಇದು ಶಿಥಿಲಾವಸ್ಥೆಯಲ್ಲಿದೆ. ಪ್ರವೇಶ ದ್ವಾರದದಲ್ಲಿ ಕಮಾನಿನ ರಚನೆಯಿದೆ. ಪ್ರವೇಶ ದ್ವಾರ ಮುಂಭಾಗದಲ್ಲಿ ಎರಡು ವಿಶಾಲವಾದ ಕಟ್ಟೆಗಳಿವೆ. ಪ್ರವೇಶದ್ವಾರದ ಮಧ್ಯಭಾಗದಲ್ಲಿ ಎರಡು ಕೋಣೆಗಳ ರಚನೆಗಳಿವೆ. ದ್ವಾರದ ಎರಡು ಭಾಗದಲ್ಲಿ ಆನೆ ಅಶ್ವ ಮತ್ತು ದಳಗಳ ಉಬ್ಬುಶಿಲ್ಪಗಳನ್ನು ಕಾಣಬಹುದಾಗಿದೆ.

**ನಂಜಲದಿನ್ನಿ:** ತಾಲೂಕು ಕೇಂದ್ರ ಮಸ್ಕಿಯಿಂದ ದಕ್ಷಿಣಕ್ಕೆ 12 ಕಿ.ಮೀ ದೂರದಲ್ಲಿರುವ ಈ ಗ್ರಾಮವು 17–18 ನೇ ಶತಮಾನದಲ್ಲಿ ಮೆದಕಿನಾಳ ನಾಡಗೌಡರ ಆಳ್ವಿಕೆಗೆ ಒಳಪಟ್ಟಂತಹ ಗ್ರಾಮವಾಗಿದ್ದು, ಅದರ ಪ್ರತಿರೂಪಕವಾಗಿ ಇಲ್ಲಿ ಕೋಟೆಯ ಅವಶೇಷಗಳು ಮತ್ತು ಹುಡೇವು ಕಾಣಬಹುದಾಗಿದೆ. ಕೋಟೆಯು ಈ ಊರಿನ ಗುಡ್ಡದ ಸುತ್ತಲು ಕಾಣಬಹುದಗಿದ್ದು ಇಂದು ಇದು ಸಂಪೂರ್ಣವಾಗಿ ನಾಶವಾಗಿದ್ದು ಅದರ ಅವಶೇಷಗಳನ್ನು ಮಾತ್ರ ನೋಡಬಹುದಾಗಿದೆ. ನಡು ಗುಡ್ಡದಲ್ಲಿ ಹುಡೇವು ಇದ್ದು ಈ ಸ್ಮಾರಕವು ಸುಮಾರು 20 ಮೀ ಎತ್ತರ ಹಾಗೂ 15 ಮೀ ವ್ಯಾಸವನ್ನು ಹೊಂದಿದೆ. ಇದರ ಕೆಳಭಾಗದಲ್ಲಿ ಸುಂಕಲಮ್ಮನ ಗುಡಿಯಿದ್ದು, ಈ ಸ್ಮಾರಕವನ್ನು ಸ್ಥಳಿಯವಾಗಿ ದೊರೆಯುವ ಅನಿಯಮಿತಾಕಾರದ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದ್ದು, ಇದರ ಪಶ್ಚಿಮ ಮತ್ತು ಮೇಲಿನಭಾಗ ಜಖಂಗೊಂಡಿದ್ದು ಪೂರ್ವಭಾಗವು ನೈಸರ್ಗಿಕ ಬೃಹತ್ ಕಲ್ಲುಗಳೊಂದಿಗೆ ನಿರ್ಮಾಣಗೊಂಡಿರುವುದರಿಂದ ಸುಸ್ಥಿತಿಯಲ್ಲಿದೆ. ಕೋಟೆ ಗೋಡೆಯು 2 ರಿಂದ 3 ಮೀ.ದಪ್ಪವಾಗಿದ್ದು ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ.

**ಹಡಗಲಿ:** ಈ ಊರಿನ ಹಿಂಭಾಗದಲ್ಲಿ ಸುಮಾರು 15–20 ಅಡಿ ಎತ್ತರ ಮತ್ತು 6–10 ಅಡಿ ವ್ಯಾಸದ ಸಣ್ಣ ಗಾತ್ರದ ಕಲ್ಲುಗಳಿಂದ ರಚನೆಗೊಂಡ ಹುಡೇವು ಕಾಣಬಹುದಾಗಿದ್ದು, ಇಂದು ಈ ಸ್ಮಾರಕವು ನಾಶದಹಂತವನ್ನು ತಲುಪಿದೆ.

**ಬುದ್ದಿನ್ನಿ ಎಸ್:** ಈ ಗ್ರಾಮದಲ್ಲಿ ಹಿಂದೆ ಕೋಟೆಯ ಅವಶೇಷಗಳು ಮತ್ತು 6 ಕಾವಲು ಗೋಪುರಗಳು ಇದ್ದು ಎಂದು ಸ್ಥಳೀಯರು ಹೇಳುತ್ತಾರಾದರೂ,[7] ಇಂದು ಅವುಗಳೆಲ್ಲವು ಸಂಪೂರ್ಣವಾಗಿ ನಾಶವಾಗಿದ್ದು ಅಲ್ಲಲ್ಲಿ ಕುರುಹುಗಳು ಮಾತ್ರ ಕಂಡು ಬರುತ್ತವೆ.

**ದೇಸಾಯಿ ಭೋಗಾಪುರ:** ಈ ಐತಿಹಾಸಿಕ ಗ್ರಾದ ಬೆಟ್ಟದ ಮೇಲೆ 16–17 ನೆ ಶತಮಾನದ ಭಗ್ನ ಕೋಟೆ ಮತ್ತು ಹುಡೇವು ಕಾಣಬಹುದಾಗಿದ್ದು, ಕೋಟೆಯನ್ನು ಕಟ್ಟಲು ಸ್ಥಳೀಯವಾಗಿ ದೊರೆಯುವ ಅನಿಯಮಿಯಾಕಾರದ ಕೆಂಪು ಕಲ್ಲುಗಳನ್ನು ಬಳಸಿಕೊಂಡಿದ್ದಾರೆ. ಈ ಕೋಟೆಯು ಪ್ರಾಚೀನ ಗ್ರಾಮದ ಸುತ್ತಲು ಸುತ್ತುವರೆದ್ದಿತ್ತು ಎಂದು ಅದರ ಅವಶೇಷಗಳಿಂದ ತಿಳಯ ಬಹುದಾಗಿದೆ. ಕೋಟೆ ಗೋಡೆಯು 2 ರಿಂದ 3 ಮೀ. ದಪ್ಪವಾಗಿದ್ದು ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆಗಳಾಗಲಿ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ. ಕೋಟೆಯ ಒಳಭಾಗದಲ್ಲಿ ದ್ಯಾವಮ್ಮ ಮತ್ತು ತಿಮ್ಮಪ್ಪನ ಸಣ್ಣ ಗುಡಿಗಳಿವೆ. ಊರಿಗೆ ಅಭಿಮುಖವಾಗಿ ಪ್ರವೇಶ ದ್ವಾರವಿದ್ದು, ಮುಂಭಾಗದಲ್ಲಿ ಅಗಸಿ ಭಾಗದವರೆಗೂ ಕೋಟೆಯು ವಿಸ್ತರಿಸಿರುವುದನ್ನು ಕಾಣಬಹುದಾಗಿದ್ದು.

**ಗುಡಿಹಾಳ (ದೇವಪುರ)**: ಈ ಊರಿನಲ್ಲಿ ಕೋಟೆಯ ಅವಶೇಷಗಳು ಕಂಡುಬಂದಿದ್ದು ಅದು 15–16ನೇ ಶತಮಾನದ ವಾಸ್ತುಲಕ್ಷಣವನ್ನು ಹೊಂದಿದೆ. ಇಂದು ನಾಶವಾಗಿರುವ ಸ್ಮಾರಕವನ್ನು ಬಳಸಿಕೊಂಡು ಸ್ಥಳಿಯರು ಮನೆಗಳನ್ನು ನಿರ್ಮಿಸಿಕೊಂಡಿರುವುದು ವಿಪರ್ಯಾಸ.

**ಯರದೊಡ್ಡಿ:** ಗ್ರಾಮದ ಮಧ್ಯಭಾಗದಲ್ಲಿ ಹುಡೇವು ಹೊಂದಿರುವ ಮೂಲಕ ಮಸ್ಕಿ ತಾಲೂಕಿನಲ್ಲಿಯೇ ವಿಶೇಷವಾದಂತಹ ರಕ್ಷಣಾವಾಸ್ತುವನ್ನು ಹೊಂದಿರುವ ಗ್ರಾಮವಾಗಿದೆ. ಈ ಸ್ಮಾರಕವು ವೃತ್ತಾಕಾರವಾಗಿದ್ದು 18–20 ಮೀ ಎತ್ತರ ಮತ್ತು 12–16 ಮೀ ವ್ಯಾಸದ ಸುತ್ತಳತೆಯನ್ನು ಹೊಂದಿದ್ದು ಇದರ ಹೊರಭಾಗವನ್ನು ಗಾರೆಯಿಂದ ಪ್ಲಾಸ್ಟರ್ ಮಾಡಲಾಗಿಲ್ಲ. ಇದಕ್ಕಾಗಿ ಸ್ಥಳಿಯವಾಗಿ ದೊರೆಯುವ ಅನಿಮಿತಾಕಾರದ ಕೆಂಪುಕಲ್ಲುಗಳನ್ನು ಬಳಸಿಕೊಂಡಿದ್ದಾರೆ. ಇದರ ಪಶ್ಚಿಮದ ಭಾಗ ಜಖಂಗೊಂಡಿದೆ.

**ಬೆಲ್ಲದಮರಡಿ**: 17–18 ನೇ ಶತಮಾನದಲ್ಲಿ ಸ್ಥಳೀಯ ದೇಸಾಯಿಗಳಿಂದ ಆಳ್ವಕೆಗೆ ಒಳಪಟ್ಟಂತಹ ಮತ್ತು ಆಡಳಿತ ಕೇಂದ್ರವಾಗಿದ್ದಂತ ಈ ಗ್ರಾಮದಲ್ಲಿ ಕೋಟೆಯ ಅವಶೇಷಗಳನ್ನು ಕಾಣಬಹುದಾಗಿದೆ. ಇಂದು ಪೂರ್ಣ ಪ್ರಮಾಣದಲ್ಲಿ ಕಾಣದಿಲ್ಲವಾದರೂ ಅದರ ಅವಶೇಷಗಳಿಂದ ಅದರ ಹಳೆಯ ಊರ ಸುತ್ತಲು ಹರಡಿಕೊಂಡಿರುವ ಅವಶೇಷಗಳಿಂದ ವ್ಯಾಪ್ತಿ ಮತ್ತು ಬೃಹತ್ ಗಾತ್ರವನ್ನು ಗುರುತಿಸ ಬಹುದಾಗಿದೆ. ಕೋಟೆಯ ಪ್ರವೇಶದ್ವಾರವು ಎರಡು ಹಂತದಲ್ಲಿದ್ದು ಎರಡು ಬಾಗಿಲನ್ನು ಕಾಣಬಹುದಾಗಿದೆ. ಈ ದ್ವಾರಗಳು ಉತ್ತರಾಭಿಮುಖವಾಗಿದ್ದು ಶಿಥಿಲಾವಸ್ಥೆಯಲ್ಲಿವೆ. ಪ್ರವೇಶ ದ್ವಾರದದಲ್ಲಿ ಕಮಾನಿನ ರಚನೆಯಿದೆ. ಪ್ರವೇಶದ್ವಾರ ಮುಂಭಾಗದಲ್ಲಿ ಎರಡು ವಿಶಾಲವಾದ ಕಟ್ಟೆಗಳಿವೆ. ಇದ್ದಾಗಿ ಸ್ಥಳೀಯವಾಗಿ ದೊರಕುವ ಶಿಲೆಗಳನ್ನು ಬಳಸಿಕೊಂಡಿದ್ದಾರೆ. ಇದರ ಒಳಭಾಗದಲ್ಲಿ ಮಲ್ಲಿಕಾರ್ಜುನ ದೇವರಗುಡಿ, ಹನುಮಂತನ ಗುಡಿ, ಹಳೆಯ ದೇಸಾಯಿಗಳ ಮನೆಗಳು ಮತ್ತು ಗುಡ್ಡದ ಮೇಲೆ ಹುಡೇವು ಕಾಣುತ್ತೇವೆ. ಈ ಸ್ಮಾರಕವು ಸುಮಾರು 20 ಮೀ ಎತ್ತರ ಹಾಗೂ 8 ಮೀ ವ್ಯಾಸವನ್ನು ಹೊಂದಿದೆ. ಸ್ಥಳೀಯವಾಗಿ ದೊರೆಯುವ ಮಧ್ಯಮ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದ್ದು, 1.5 ರಿಂದ

2 ಮೀ.ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ. ಗ್ರಾಮದ ಅಭಿಮುಖ ದಿಕ್ಕಿನ ಗೋಡೆಯಲ್ಲಿ ಚಿಕ್ಕ ದ್ವಾರಕಿಂಡಿಯನ್ನು ಕಾಣಬಹುದಾಗಿದೆ. ಈ ಸ್ಮಾರಕವು ನಶಿಸುವ ಹಂತಕ್ಕೆ ತಲುಪಿರುವುದು ವಿರ್ಪಯಾಸ. ಇನ್ನೂಳದಂತೆ ಆನಂದಗಲ್ಲ್, ಬಸಾಪುರ ಕೆ, ಕನ್ನಾಳ, ತಿಮ್ಮಾಪುರ, ತಿರ್ಥಬಾವಿ ಗ್ರಾಮಗಳಲ್ಲಿ ಸಹ ಹುಡೇವುಗಳನ್ನು ಕಾಣಬಹುದಾಗಿದ್ದು ಇಂದು ಇವುಗಳು ಭಾಗಶಃ ನಾಶವಾಗಿವೆ.

**ಹುಡೇವುಗಳ ಸಾಮಾನ್ಯ ಲಕ್ಷಣಗಳು**

1. ರಕ್ಷಣಾತ್ಮಕ ಕಟ್ಟಡಗಳಾದ ಇವುಗಳ ಕಾಲವನ್ನು ತಿಳಿಯಲು ಯಾವುದೇ ಲಿಖಿತ ದಾಖಲೆಗಳು ದೊರೆತಿಲ್ಲವಾದರಿಂದ ಇವುಗಳ ಶೈಲಿ ಹಾಗೂ ಬಳಕೆಯಾದ ತಂತ್ರಗಾರಿಕೆಗಳ ಆಧಾರದ ಮೇಲೆ ಇವುಗಳ ಕಾಲವನ್ನು ಕ್ರಿ.ಶ. 15 ರಿಂದ 18 ನೇ ಶತಮಾನದವರೆಗೆ ಎಂದು ಗುರುತಿಸಬಹುದಾಗಿದೆ.
2. ಹುಡೇವುಗಳು ಸಾಮಾನ್ಯವಾಗಿ ವೃತ್ತಾಕಾರದಲ್ಲಿ ಕಂಡುಬಂದಿವೆ.
3. ಇವು ಸಾಮಾನ್ಯವಾಗಿ 15 ರಿಂದ 20 ಮೀ ಎತ್ತರ ಹಾಗೂ 8 ರಿಂದ 10 ಮೀ. ವ್ಯಾಸದ ವಿಸ್ತಿರ್ಣಗಳಿಂದ ಕೂಡಿವೆ.
4. ಇವುಗಳ ಗೋಡೆ 1.5 ರಿಂದ 2.ಮೀ.ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಅದರ ಗಾತ್ರ ಕಡಿಮೆಯಾಗಿವೆ.
5. ಬಹುತೇಕವಾಗಿ ಹುಡೇವುಗಳನ್ನು ಗ್ರಾಮದ ಹೊರಭಾಗದ ಎತ್ತರದ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಆದರೆ ಎರದೊಡ್ಡಿ ಗ್ರಾಮದಲ್ಲಿ ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾಗಿದೆ.
6. ಬಹುತ್ತೇಕ ಹುಡೇವುಗಳು ದೊರೆತಿರುವುದು ಪ್ರಾಚೀನ ಮತ್ತು ಮಧ್ಯಕಾಲೀನದಿಂದಲೂ ಕಂಡುಬಂದರುವ ಗ್ರಾಮಗಳಲ್ಲಿ ಮಾತ್ರ ಕಂಡುಬರುತ್ತವೆ.
7. ಒಳಮೈ ಮತ್ತು ಹೊರಭಾಗವನ್ನು ಗಾರೆ ಅಥವಾ ಇತರೆ ಮಾಧ್ಯಮಗಳಿಂದ ಪ್ಲಾಸ್ಟರ್ ಮಾಡಲಾಗಿಲ್ಲ.
8. ಗೋಡೆಗಳನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದೆ.
9. ಇಲ್ಲಿ ಯಾವುದೇ ತರನಾದ ಸೂಕ್ಷ್ಮ ಕೆತ್ತನೆ ಅಥವಾ ಕಲಾತ್ಮಕ ವಿನ್ಯಾಸಗಳು ಕಂಡುಬಂದಿಲ್ಲ.
10. ಹುಡೇವುಗಳ ಕೆಳಭಾಗದಲ್ಲಿ ಯಾವುದಾದರೊಂದು ಸಣ್ಣ ಗುಡಿಯನ್ನು ಕಂಡು ಬರುವುದು ವಿಶೇಷ

ಇಂತಹ ಗ್ರಾಮ ರಕ್ಷಣಾ ವಾಸ್ತುವಿನ ನಿರ್ವಹಣೆ ಮತ್ತು ಆಡಳಿತ್ಮಾಕ ವ್ಯವಸ್ಥೆಯ ಬಗೆಗೆ ಹೆಚ್ಚಿನ ಮಾಹಿತಿ ತಿಳಿದು ಬರುವುದಿಲ್ಲ. ಆದರೇ ಅನೇಕ ಗ್ರಾಮಗಳಲ್ಲಿ 'ಹುಡೆದವರು' 'ನಾಯಕವಡೆಯವರು' ಎನ್ನುವ ಮನೆತನಗಳು ಇವೆ. ಇವರು ಈ ಗ್ರಾಮಗಳ ರಕ್ಷಣೆಯ ಹಕ್ಕನ್ನು ಹೊಂದಿರುವ ಸಾಧ್ಯತೆಗಳನ್ನು

ಅಲ್ಲಗಳಯುವಂತಿಲ್ಲ. ಲಿಖಿತ ಆಧಾರಗಳು ಲಭ್ಯವಿಲ್ಲದೆ ಇರುವುದರಿಮದ ಅಸಂಖ್ಯ ಹುಡೆಗಳ ನಿರ್ಮಾಣದ ಹಿಂದಿನ ಉದ್ದೇಶ ತಿಳಿದುಬರುವುದಿಲ್ಲ, ನಿರ್ಮಾಣದ ಶೈಲಿ ಹಾಗೂ ವಿನ್ಯಾಸದ ಆಧಾರಗಳಿಂದ ಇವುಗಳ ಕಾರ್ಯಗಳು ಹಾಗೂ ಉದ್ದೇಶಗಳನ್ನು ಅರ್ಥೈಸಬಹುದು. ಒಂದು ಹುಡೆಯಿಂದ ಇನ್ನೊಂದು ಗ್ರಾಮದಲ್ಲಿರುವ ಹುಡೆಯನ್ನು ಕಾಣಲು ಸಾಧ್ಯವಾಗುವಂತೆ ಅಂತರವನ್ನು ಕಾಯ್ದುಕೊಂಡಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಇವು ಗ್ರಾಮಸ್ಥರಿಗೆ ತಾತಕಾಲಿಕ ರಕ್ಷಣೆ ಒದಗಿಸುವುರ ಜೊತೆಗೆ ವೈರಿ ಸೈನಿಕರ ಚಲನವಲನಗಳನ್ನು ಗಮನಿಸಲು ಸಹ ಅನುಕೂಲವಾಗುತ್ತದ್ದವು ಎಂದು ತಿಳಿಯಬಹುದಾದ ಪ್ರಮುಖ ಅಂಶವಾಗಿದೆ. ಹಾಗೂ ಅನ್ಯ ರಾಜ್ಯದ ಸೈನಿಕರ ಆಕ್ರಮಣದ ವಿಷಯವನ್ನು ಸಂಬಂಧಪಟ್ಟ ಸೈನ್ಯಾಧಿಕಾರಿಗಳಿಗೆ ರವಾನಿಸಲು ಹುಡೆಗಳು ಸಹಾಯಕವಾಗಿದ್ದವು. ಹುಡೆಗಳ ಮೇಲ್ಭಾಗದಲ್ಲಿ ಗೋಡೆಗಳಲ್ಲಿ ಸುಟ್ಟ ಕರಕಲಾದ ಅವಶೇಷಗಳು ಕಂಡುಬಂದಿವೆ. ಇದು ಸಂಕೇತ ರವಾಸಿನಿಸುವ ತಂತ್ರ ಎಂದು ತರ್ಕಿಸಬಹುದಾಗಿದೆ. ಇಂತಹ ವೈಶಿಷ್ಟತೆಗಳಿಂದ ಈ ಗ್ರಾಮರಕ್ಷಣಾವಾಸ್ತುಗಳು ಇಂದು ಬಹುತ್ತೇಕ ಗ್ರಾಮಗಳಲ್ಲಿ ಸ್ಥಳೀಯರ ಐತಿಹಾಸಿಕ ಅರಿವಿನ ಕೊರತೆ, ನಿರ್ಲಕ್ಷ್ಯ, ಅಸಡ್ಡೆ ಭಾವನೆ, ದುರಾಶೆ ಹಾಗೂ ನೈಸರ್ಗಿಕ ವಿಕೋಪಗಳು ಮತ್ತು ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ಇಂದು ಈ ಐತಿಹಾಸಿಕ ಸ್ಮಾರಕಗಳು ವಿನಾಶವಾಗುತ್ತಿರುವುದು ವಿಪರ್ಯಾಸ.

**ಛಾಯಚಿತ್ರಗಳು**










ಮೊಡಲದಿನ್ನಿಗ್ರಾಮದ ಹುಡೇವು ಮತ್ತು ಕೋಟೆ ಪ್ರವೇಶದ್ವಾರ

ಕೋಟೆಯ ಪ್ರವೇಶದ್ವಾರ–ಸಾನಬಾಳ




ಹುಡೇವು–ತಲೇಖಾನ್



ಹುಡೇವು–ಯರದೊಡ್ಡಿ

## ಗ್ರಂಥಋಣ

1. ಜೋಷಿ ಎಸ್.ಕೆ., 2008, **ಕರ್ನಾಟಕ ಕೋಟೆ–ಕೊತ್ತಲಗಳು**
2. ಅರುಣಿ ಎಸ್.ಕೆ., 2019, **ಕರ್ನಾಟಕ ಇತಿಹಾಸದ ಅನ್ವೇಷಣೆಗಳು (ಮಧ್ಯಕಾಲೀನ ನಗರೀಕರಣ ಮತ್ತು ರಕ್ಷಣಾ ವ್ಯವಸ್ಥೆಯ ವಿಶ್ಲೇಷಣೆಗಳು)**
3. ಅಮರೇಶ, 2013, **ಬಳಗಾನೂರು ಹೋಬಳ ಪರಿಸರ: ಸಾಂಸ್ಕೃತಿಕ ಅಧ್ಯಯನ,** (ಅಪ್ರಕಟಿತ ಎಂ.ಫಿಲ್ ಪ್ರೌಢ ಪ್ರಬಂಧ)
4. ನಾಗರಾಜ., 2018, **ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ**, (ಅಪ್ರಕಟಿತ ಎಂ.ಫಿಲ್ ಪ್ರೌಢ ಪ್ರಬಂಧ)